ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿ.:2172/2023
ಸಿ.ಡಬ್ಲ್ಯು 3 ಪಿ.ಡಬ್ಲೂ :6

| | |
|---|---|
| ಸಾಕ್ಷಿದಾರರ ಹೆಸರು | ಅಚ್ಚುತ ಶೆಣೈ |
| ತಂದೆಯ ಹೆಸರು | ರಾಧಾಕೃಷ್ಣ ಶೆಣೈ |
| ವಯಸ್ಸು | 42 ವರ್ಷ |
| ಉದ್ಯೋಗ | ಸಿವಿಲ್ ಇಂಜಿನಿಯರ್ |
| ವಾಸಸ್ಥಳ | ಉಚ್ಚಿ ಲ |

ದಿನಾಂಕಃ 03-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ

ಆರೋಪಿಯನ್ನು ಬರ್ಕೆ ಪೊಲೀಸ್ ಠಾಣೆಯಲ್ಲಿ ನೋಡಿರುತ್ತೇನೆ. ಆ ಸಂದರ್ಭದಲ್ಲಿ ಆರೋಪಿತರು ಚಿನ್ನ ಕಳ್ಳತನ ಮಾಡಿರುವುದಾಗಿ ಹೇಳಿ ನಮ್ಮ ಸಹಿ ಪಡೆದುಕೊಂಡಿರುತ್ತಾರೆ. ಸದ್ರಿ ದಾಖಲೆ ನಿಪಿ 6 ಆಗಿದ್ದು, ನಿಪಿ 6 ದೃಡೀಕೃತ ಪ್ರತಿಯಾದ ಕಾರಣ ಸಾಕ್ಷಿ ಸಹಿಯನ್ನು ನಿಶಾನೀಕರಿಸಲಿಲ್ಲ. ಅದರಲ್ಲಿ ಏನು ಬರವಣಿಗೆಯಾಗಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

**ಪಾಟೀ ಸವಾಲುಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿ ಕೂಲ ಸಾಕ್ಷಿ ಎಂದು ತಿಳಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ ನೀಡಲಾಯಿತು.**

ದಿಃ 13-08-2005 ರಂದು ಪೊಲೀಸರು ನನ್ನನ್ನು ಹಾಗೂ ಚಾಸಾ 4 ರವರನ್ನು ಪೊಲೀಸ್ ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ.

ಆ ದಿನ ಅಲ್ಲಿ ಸುದರ್ಶನ ಮತ್ತು ಮಣಿಕಂಠ ಎಂಬ ಆರೋಪಿತರು ಇದ್ದರು ಎಂದರೆ ಸರಿಯಲ್ಲ. ನಂತರ ಆರೋಪಿತರು ನಮ್ಮನ್ನು ಹಾಗೂ ಪೊಲೀಸರನ್ನು ಕರೆದುಕೊಂಡು ತೀರ್ಥಹಳಿಳ ತಾಲೂಕು ಬಿದುರುಗೋಡು ಗ್ರಾಮದಲ್ಲಿರುವ ಉಷಾ ಜ್ಯುವೆಲ್ಲರಿ ಅಂಗಡಿಗೆ ಬೆಳಿಗ್ಗೆ 8.30 ಗಂಟೆಗೆ ತಲುಪಿರುತ್ತೇವೆ ಎಂದರೆ ಸರಿಯಲ್ಲ. ಅಲ್ಲಿ ಅಂಗಡಿಯಲ್ಲಿದ್ದ ಪ್ರಕಾಶ್ ಆತನನ್ನು ತೋರಿಸಿ ಈತನಿಗೆ ನಾವು ಚಿನ್ನಾಭರಣ ಮಾರಾಟ ಮಾಡಿದ ಬಗ್ಗೆ ಸುದರ್ಶನ ಎಂಬ ಆರೋಪಿ ತಿಳಿಸಿದ ಎಂದರೆ ಸರಿಯಲ್ಲ. ನಂತರ ಪ್ರಕಾಶ ಆಚಾರ್ಯರು ಸಹ ಒಪ್ಪಿ ಒಟ್ಟು 14 ಚಿನ್ನಾಭರಣಗಳನ್ನು ಹಾಜರು ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಅವುಗಳ ಪೈಕಿ ಕ್ರಮ ಸಂಖ್ಯೆ 8 ರಿಂದ 14 ನೇಯವುಗಳು ಈ ಪ್ರಕರಣಕ್ಕೆ ಸಂಬಂದಿಸಿದ ಚಿನ್ನಾಭರಣಗಳು ಎಂದರೆ ಸರಿಯಲ್ಲ. ನಂತರ ಅವುಗಳನ್ನು ವಶಪಡಿಸಿಕೊಂಡು ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 10.15 ರ ವರೆಗೂ ನಿಪಿ 6 ರಂತೆ ಮಹಜರು ಕ್ರಮ ಜರುಗಿಸಲಾಯಿತು ಎಂದರೆ ಸರಿಯಲ್ಲ. ಅದೇ ದಿನ ಘಟನೆ ವಿಚಾರವಾಗಿ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ದೃಡೀಕೃತ ಪ್ರತಿಯನ್ನು ನಿಪಿ 8 ಎಂದು ಗುರುತಿಸಲಾಯಿತು. ಆ ದಿನ ನಮ್ಮನ್ನು ಉಷಾ ಜ್ಯುವೆಲ್ಲರಿ ಅಂಗಡಿಗೆ ಕರೆದುಕೊಂಡು ಹೋದ ವ್ಯಕ್ತಿಗಳ ಪೈಕಿ ನ್ಯಾಯಾಲಯದ ಮುಂದಿರುವ ಆರೋಪಿತನು ಎಂದರೆ ಸರಿಯಲ್ಲ. ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ ಉಡುಪಿ.